116

# ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:- ಚಾಲೆಂಜ್ ಫಂಡ್ ಯೋಜನೆಯಡಿ ಸೃಜನಾತ್ಮಕವಾದ ಹಾಗೂ ಪರಿಣಾಮಕಾರಿಯಾದ ಯೋಜನೆಗಳನ್ನು ಸರ್ಕಾರದ ಇಲಾಖೆಗಳು ಹಾಗೂ ಸಂಸ್ಥೆಗಳಲ್ಲಿ ಜಾರಿಗೆ ತರುವ ಸಲುವಾಗಿ, ತುಮಕೂರು ಜಿಲ್ಲೆಯ "ರೈತ ರಕ್ಷಣಾ" ಯೋಜನೆಗೆ ಅನುದಾನ ಬಿಡುಗಡೆ – ಕುರಿತು.**

**ಓದಲಾಗಿದೆ:-**
1) ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 92 ಇಆಸು 2009, ದಿನಾಂಕ:08.07.2010.
2) ಸರ್ಕಾರದ ಪತ್ರ ಸಂಖ್ಯೆ: ಸಿಆಸುಇ 118 ಇಆಸು 2015, ದಿನಾಂಕ:25.06.2015.
3) ಸರ್ಕಾರದ ಪ್ರಧಾನ ಕಾರ್ಯದರ್ಶಿ, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಇವರ ಪ್ರಸ್ತಾವನೆ ಸಂಖ್ಯೆ: ಹಿಂವಕ 422 ಪ್ರಕಾ 2015, ದಿನಾಂಕ:27.08.2015 ಮತ್ತು ಸಂಖ್ಯೆ: ಹಿಂವಕ 556 ಪ್ರಕಾ 2015, ದಿನಾಂಕ:02.11.2015.
4) ದಿನಾಂಕ:13.10.2015 ರಂದು ಸರ್ಕಾರ ಮುಖ್ಯ ಕಾರ್ಯದರ್ಶಿಯವರ ಅಧ್ಯಕ್ಷತೆಯಲ್ಲಿ ನಡೆದ ಚಾಲೆಂಜ್ ಫಂಡ್ ಯೋಜನೆಯ ಸಭಾ ನಡವಳಿ.

**ಪ್ರಸ್ತಾವನೆ:**

ಮೇಲೆ ಓದಲಾದ (1)ರ ದಿನಾಂಕ:08.07.2010 ರ ಸರ್ಕಾರದ ಆದೇಶದಲ್ಲಿ ಸೃಜನಾತ್ಮಕವಾದ ಹಾಗೂ ಪರಿಣಾಮಕಾರಿಯಾದ ಯೋಜನೆಗಳನ್ನು ಸರ್ಕಾರದ ಇಲಾಖೆಗಳು ಹಾಗೂ ಸಂಸ್ಥೆಗಳಲ್ಲಿ ಜಾರಿಗೆ ತರುವ ಸಲುವಾಗಿ ಚಾಲೆಂಜ್ ಫಂಡ್ ಯೋಜನೆಯನ್ನು ಸ್ಥಾಪಿಸಲಾಗಿದೆ. ಈ ಯೋಜನೆಯಲ್ಲಿ ಗುಣಮಟ್ಟದ ಗುರಿಗಳನ್ನು ಸಾಧಿಸಲು ಪ್ರಯೋಗಾತ್ಮಕ ಯೋಜನೆಗಳನ್ನು ಅನುಷ್ಠಾನಗೊಳಿಸುವ ಸಲುವಾಗಿ ಅನುದಾನವನ್ನು ಬಿಡುಗಡೆ ಮಾಡಲು ಉದ್ದೇಶಿಸಲಾಗಿದೆ. ಈ ಯೋಜನೆಗೆ ಸರ್ಕಾರವು 2015-16ನೇ ಸಾಲಿನಲ್ಲಿ ರೂ.1000 ಲಕ್ಷಗಳನ್ನು ಮೀಸಲಿರಿಸಿದೆ.

ಓದಲಾದ (2)ರ ದಿನಾಂಕ:25.06.2015 ರ ಪತ್ರದಲ್ಲಿ ಚಾಲೆಂಜ್ ಫಂಡ್ ಯೋಜನೆಯಡಿ ಪ್ರಸ್ತಾವನೆಗಳನ್ನು ಸರ್ಕಾರದ ಎಲ್ಲಾ ಇಲಾಖೆಗಳಿಂದ ಪಡೆಯುವ ಸಲುವಾಗಿ ಪತ್ರವನ್ನು ಬರೆಯಲಾಗಿತ್ತು.

ಓದಲಾದ (3)ರ ದಿನಾಂಕ:27.08.2015 ಮತ್ತು 02.11.2015ರ ಪ್ರಸ್ತಾವನೆಗಳಲ್ಲಿ ಡಾ:ಶಾಲಿನಿ ರಜನೀಶ್, ಸರ್ಕಾರದ ಪ್ರಧಾನ ಕಾರ್ಯದರ್ಶಿ, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಹಾಗೂ ತುಮಕೂರು ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿ ಇವರು ತುಮಕೂರು ಜಿಲ್ಲೆಯಲ್ಲಿ ರೈತರ ಆತ್ಮಹತ್ಯೆ ಪ್ರಕರಣಗಳು ಹೆಚ್ಚಿರುವ ಕಾರಣ ಅಂತಹ ಪ್ರಕರಣಗಳನ್ನು ತಡೆಗಟ್ಟಲು "ರೈತ ರಕ್ಷಣಾ" ಯೋಜನೆಯನ್ನು ತಯಾರಿಸಿದ್ದು, ಅದನ್ನು ಜಾರಿಗೆ ತರುವ ಸಲುವಾಗಿ ರೂ.54.00 ಲಕ್ಷಗಳನ್ನು ಚಾಲೆಂಜ್ ಫಂಡ್ ಯೋಜನೆಯಡಿ ಮಂಜೂರು ಮಾಡಲು ಪ್ರಸ್ತಾವನೆ ಸಲ್ಲಿಸಿರುತ್ತಾರೆ.

ಓದಲಾದ (4) ರಲ್ಲಿ ಚಾಲೆಂಜ್ ಫಂಡ್ ಯೋಜನೆ ಜಾರಿಗೆ ಸಂಬಂಧಪಟ್ಟಂತೆ ಅನುದಾನ ಬಿಡುಗಡೆ ಮಾಡಲು ಸರ್ಕಾರದ ಮುಖ್ಯ ಕಾರ್ಯದರ್ಶಿಗಳ ಅಧ್ಯಕ್ಷತೆಯಲ್ಲಿ ದಿನಾಂಕ:13.10.2015 ರಂದು

... 2

ನಡೆದ ಸಭೆಯಲ್ಲಿ "ರೈತ ರಕ್ಷಣಾ" ಯೋಜನೆ ಕುರಿತು ಚರ್ಚಿಸಲ್ಪಟ್ಟಿದ್ದು, ಯೋಜನೆ ಕುರಿತಾದ ಹೆಚ್ಚುವರಿ ಮಾಹಿತಿಗಳನ್ನು ಪಡೆದಿದ್ದು, ಯೋಜನೆಯು ಉತ್ತಮವಾದುದೆಂದು ಪರಿಗಣಿಸಿ ಈ ಕೆಳಗಿನಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ:ಸಿಆಸುಇ:219:ಇಆಸು:2015**
**ಬೆಂಗಳೂರು, ದಿನಾಂಕ:08.12.2015**

ಪ್ರಸ್ತಾವನೆಯಲ್ಲಿ ವಿವರಿಸಿರುವಂತೆ ಸರ್ಕಾರದ ಚಾಲೆಂಜ್ ಫಂಡ್ ಯೋಜನೆಯಡಿ ಸೃಜನಾತ್ಮಕವಾದ ಹಾಗೂ ಪರಿಣಾಮಕಾರಿಯಾದ ಯೋಜನೆಗಳನ್ನು ಸರ್ಕಾರದ ಇಲಾಖೆಗಳು ಹಾಗೂ ಸಂಸ್ಥೆಗಳಲ್ಲಿ ಜಾರಿಗೆ ತರುವ ಸಲುವಾಗಿ, ಡಾ:ಶಾಲಿನಿ ರಜನೀಶ್, ಸರ್ಕಾರದ ಪ್ರಧಾನ ಕಾರ್ಯದರ್ಶಿ, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಹಾಗೂ ತುಮಕೂರು ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿ ಇವರು ರೂಪಿಸಿರುವ ತುಮಕೂರು ಜಿಲ್ಲೆಯ "ರೈತ ರಕ್ಷಣಾ" ಯೋಜನೆಯನ್ನು ಪುರಸ್ಕರಿಸಿದ್ದು, ಯೋಜನೆ ಕಾರ್ಯಾರಂಭಕ್ಕಾಗಿ ರೂ.54.00 ಲಕ್ಷಗಳ (ಐವತ್ನಾಲ್ಕು ಲಕ್ಷ ರೂಪಾಯಿಗಳು ಮಾತ್ರ) ಅನುದಾನವನ್ನು ಬಿಡುಗಡೆಗೆ ಮಂಜೂರು ಮಾಡಿದೆ.

ಈ ಅನುದಾನವನ್ನು ತುಮಕೂರು ಜಿಲ್ಲೆಯ ಜಿಲ್ಲಾಧಿಕಾರಿ ಕಾರ್ಯಾಲಯದ ಡಿ.ಡಿ.ಒ. ಸಂಖ್ಯೆ: **0800RD0001** ಗೆ ಬಿಡುಗಡೆ ಮಾಡಲಾಗಿದೆ. ಅನುದಾನ ಬಳಕೆಯ ಪ್ರಮಾಣ ಪತ್ರವನ್ನು ಯೋಜನೆ ನಿರ್ವಹಿಸುವ ಅಧಿಕಾರಿ ಸಕಾಲದಲ್ಲಿ ಒದಗಿಸುವುದು.

ಈ ವೆಚ್ಚವನ್ನು ಲೆಕ್ಕ ಶೀರ್ಷಿಕೆ 2052-00-090-0-25-059 (ಯೋಜನೇತರ) ಆಡಳಿತ ಸುಧಾರಣೆ ಸವಾಲು ನಿಧಿ-ಇತರೆ ಖರ್ಚುಗಳ ಅಡಿಯಲ್ಲಿ ಭರಿಸತಕ್ಕದ್ದು.

ಈ ಯೋಜನೆಯ ಕಾರ್ಯಾರಂಭದ ಮುನ್ನ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಿಕತೆ ಅಧಿನಿಯಮ (ಕೆ.ಟಿ.ಪಿ.ಪಿ.) 4(ಜಿ) ಅಡಿ ವಿನಾಯಿತಿಯನ್ನು ಪಡೆಯುವುದು ಅವಶ್ಯಕ.

ಈ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ: ಆಇ 812/ವೆಚ್ಚ-12/2015, ದಿನಾಂಕ:30.11.2015 ರಲ್ಲಿ ನೀಡಿರುವ ಸಹಮತದ ಅನುಸಾರ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಹಾಗೂ ಅವರ ಹೆಸರಿನಲ್ಲಿ
8/12

**(ಅಪರ್ಣಾ ಪಾವಟೆ)**
ಸರ್ಕಾರದ ಅಧೀನ ಕಾರ್ಯದರ್ಶಿ,
ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ
(ಆಡಳಿತ ಸುಧಾರಣೆ-ತರಬೇತಿ)

**ಪ್ರತಿ:**

1. ಮಹಾಲೇಖಪಾಲರು ಕರ್ನಾಟಕ, (ಆಡಿಟ್ 1 ಮತ್ತು 2) (ಲೆಕ್ಕಪತ್ರ 1 ಮತ್ತು 2), ಬೆಂಗಳೂರು.
2. ಸರ್ಕಾರದ ಪ್ರಧಾನ ಕಾರ್ಯದರ್ಶಿ, ಆರ್ಥಿಕ ಇಲಾಖೆ, ವಿಧಾನಸೌಧ, ಬೆಂಗಳೂರು.

11/12/15

... 3

3. ಡಾ:ಶಾಲಿನಿ ರಜನೀಶ್, ಸರ್ಕಾರದ ಪ್ರಧಾನ ಕಾರ್ಯದರ್ಶಿ, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಹಾಗೂ ತುಮಕೂರು ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿ, ವಿಕಾಸಸೌಧ, ಬೆಂಗಳೂರು.
4. ಜಿಲ್ಲಾಧಿಕಾರಿ, ತುಮಕೂರು ಜಿಲ್ಲೆ, ತುಮಕೂರು.
5. ಉಪ ನಿರ್ದೇಶಕರು, ಟಿ.ಎನ್.ಎಂ.ಸಿ., ಖನಿಜ ಭವನ, ರೇಸ್ ಕೋರ್ಸ್ ರಸ್ತೆ, ಬೆಂಗಳೂರು.
6. ಸರ್ಕಾರದ ಪ್ರಧಾನ ಕಾರ್ಯದರ್ಶಿ, ಸಿಆಸುಇ (ಆಸು) ರವರ ಆಪ್ತ ಕಾರ್ಯದರ್ಶಿ.
7. ಸರ್ಕಾರದ ಜಂಟಿ ಕಾರ್ಯದರ್ಶಿ, ಸಿಆಸುಇ (ಆಸು) ರವರ ಆಪ್ತ ಸಹಾಯಕರು.
8. ಶಾಖಾ ರಕ್ಷಾ ಕಡತ / ಹೆಚ್ಚುವರಿ ಪ್ರತಿಗಳು.

**Issued** ............ **Dated** ............

**D.P.A.R. (R&I)**